ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್ಎಫ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.226/2012

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ರಮೇಶ ವೈದ್ಯ | ಪಿಡಬ್ಲೂ | ಃ | 22 |
| ತಂದೆಯ ಹೆಸರು | ಃ | ವಿನಾಯಕರಾವ್ | ಸಿಡಬ್ಲೂ | ಃ | 11 |
| ವಯಸ್ಸು | ಃ | 70 ವರ್ಷ | | | |
| ಉದ್ಯೋಗ | ಃ | ನಿವೃತ್ತ ಸರ್ಕಾರಿ ಅಧಿಕಾರಿ | | | |
| ವಾಸ ಸ್ಥಳ | ಃ | ಧಾರವಾಡ | | | |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 25/07/2019
ಮುಖ್ಯ ವಿಚಾರಣೆ ಎಪಿಪಿ ಯವರಿಂದ ಃ

ನಾನು 1998 ರಿಂದ 2001 ರವರೆಗೆ ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ ಆಡಿಟ್ ಆಫೀಸರ್ ಅಂತಾ ಕೆಲಸ ಮಾಡಿರುತ್ತೇನೆ. ನನ್ನ ವ್ಯಾಪ್ತಿಯಲ್ಲಿ ಆಗ ಹಳೇಯ ಧಾರವಾಡ ಜಿಲ್ಲೆ ಹಾಗೂ ಪೂರ್ತಿ ಧಾರವಾಡ ಜಿಲ್ಲೆ ಬರುತ್ತದೆ. ಹುದ್ದೆಯಲ್ಲಿ ನನ್ನ ಮೇಲಾಧಿಕಾರಿ ಎಂದರೆ ಸಹಾಯಕ ನಿಯಂತ್ರಣಾಧಿಕಾರಿ ಬರುತ್ತಾರೆ. ನಮ್ಮ ಸಹಾಯಕ ನಿಯಂತ್ರಣಾಧಿಕಾರಿ ಯಾವುದೇ ಸಂಸ್ಥೆಯನ್ನು ಆಡಿಟ್ ಮಾಡಿ ಅಂತಾ ಹೇಳಿದ ಪಕ್ಷದಲ್ಲಿ ಅವರೇ ಬ್ಯಾಚ್ ಮಾಡಿ ನಮಗೆ ಅಡಿಟ್ ಮಾಡಿ ಅಂತಾ ಆದೇಶ ಕೊಡುತ್ತಿದ್ದರು. ಅವರ ಆದೇಶದ ಪ್ರಕಾರ ನಾನು ಆಡಿಟ್ ಮಾಡುವಾಗ ನಾವು ಕರಡು ಪ್ರತಿ ತಯಾರಿಸಿ ಸಂಬಂಧಿಸಿದ ಸಂಸ್ಥೆಗೆ ನ್ಯೂನ್ಯತೆಗಳನ್ನು ಸರಿಪಡಿಸಲು ತಿಳಿಸುತ್ತಿದ್ದೇವು ಅವರು ನ್ಯೂನ್ಯತೆಯನ್ನು ಸರಿಪಡಿಸದೇ ಇದ್ದಲ್ಲಿ ನಮ್ಮ ಹಸ್ತಾಕ್ಷರದಲ್ಲಿ ಸದರಿ ಕರಡು ಪ್ರತಿಯನ್ನು ಸಹಾಯಕ ನಿಯಂತ್ರಣಾಧಿಕಾರಿ ರವರಿಗೆ ಸಲ್ಲಿಸುತ್ತಿದ್ದೇವು. ಸದರಿ ಅಧಿಕಾರಿಗಳು ಸರಿ ಇದ್ದರೇ ಅನುಮೋಧಿಸುತ್ತಿದ್ದರು ಇಲ್ಲದಿದ್ದರೆ ಮರು ತಪಾಸಣೆಗೆ ತಿಳಿಸುತ್ತಿದ್ದರು. ಅದರಲ್ಲಿ ತಿಳಿಸಿದ ಸೂಚನೆಗಳನ್ನು ಪಾಲಿಸಿ ಮತ್ತೇ ಕರಡು ಪ್ರತಿಯನ್ನು ಕೊಡುತ್ತಿದ್ದೇವು. ನಂತರ ಅದನ್ನು ಸಹಾಯಕ ನಿಯಂತ್ರಣಾಧಿಕಾರಿ ಇವರು ಅಂತಿಮ ವರದಿಯನ್ನು ಮಾಡುತ್ತಿದ್ದರು.

1999-2000 ರಲ್ಲಿ ಮುಖ್ಯ ಲೆಕ್ಕಪರಿಶೋಧಕರು ಹುಬ್ಬಳ್ಳಿ-ಧಾರವಾಡ ಡೆಪ್ಯೂಟೇಷನ್ ಮೇಲೆ ಅವರ ಆಧೀನದಲ್ಲಿ ಕರ್ತವ್ಯ ಮಾಡಿರುತ್ತೇನೆ. ಆ ಅವಧಿಯಲ್ಲಿ ಕರಡುಪ್ರತಿಯನ್ನು ಮುಖ್ಯ ಲೆಕ್ಕಪರಿಶೋಧಕರಿಗೆ ನೀಡಿರುತ್ತೇನೆ. ನಂತರ ಅವರು

ಅಂತಿಮ ಅಡಿಟ್ ವರದಿಯನ್ನು ನೀಡುತ್ತಿದ್ದರು. ಸಹಾಯಕ ನಿಯಂತ್ರಣಾಧಿಕಾರಿ ಲೆಕ್ಕಪರಿಶೋಧಕರು ಧಾರವಾಡ ಇವರು ನನ್ನನ್ನು ಮತ್ತು ಚಾಸಾ 12 ರವರನ್ನು ಡೆಪ್ಯೂಟಿಷನ್ ಮೇಲೆ ಕರ್ತವ್ಯಕ್ಕೆ ನೇಮಿಸಿದ ಬಗ್ಗೆ ಆದೇಶ ಪ್ರತಿ ಕಾರ್ಬನ ಕಾಫಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ.18 ಎಂದು ಗುರುತಿಸಲಾಯಿತು. ಸಾಕ್ಷಿಯು ಅದರ ಜೊತೆಗೆ ಇದ್ದ ಲಿಸ್ಟ ಆಫ್ ವಿಶೇಷ ಅಡಿಟ್‌ಗೆ ಅವಶ್ಯವಿರುವ ದಾಖಲೆಗಳ ಪಟ್ಟಿ ನೀಡಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು.

ಮುಖ್ಯ ಲೆಕ್ಕಪರಿಶೋಧಕರು ಹುಬ್ಬಳ್ಳಿ-ಧಾರವಾಡ ಇವರು ನೀಡಿದ ಅಡಿಟ್ ವರದಿಯ ಪೈಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಾನು ಕೊಟ್ಟ ಕರಡು ಪ್ರತಿಯ ಆಧಾರದ ಮೇಲೆ ಮುಖ್ಯ ಲೆಕ್ಕಪರಿಶೋಧಕರು ತಯಾರು ಮಾಡಿರುತ್ತಾರೆ ಈ ಹಂತದಲ್ಲಿ ಸದರಿ ದಾಖಲೆಯನ್ನು ಸದರಿ ಸಾಕ್ಷಿಯು ಮೂಲಕ ಗುರುತಿಸುವಲ್ಲಿ ಆರೋಪಿಗಳ ಪರ ವಕೀಲರು ಆ ವರದಿಯನ್ನು ನೀಡಿದ ವ್ಯಕ್ತಿಯ ಮೂಲಕವೇ ಗುರುತಿಸಬೇಕಾಗುತ್ತದೆ ಎಂದು ತಕರಾರು ಮಾಡಿದ್ದು ಸದರಿ ತಕರಾರು ನ್ಯಾಯಸಮ್ಮತವಾಗಿದ್ದರಿಂದ ಸದರಿ ವರದಿಯನ್ನು ಗುರುತಿಸಲಾಗಲಿಲ್ಲ.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಾಡಲು ಮಾನ್ಯ ಸಸಅ ರವರು ಸಮಯ ಕೇಳಿದ್ದರಿಂದ ಸಮಯ ನೀಡಲಾಯಿತು.

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಪ್ , ಹುಬ್ಬಳ್ಳಿ.